ಆ) ಪ್ರಸಕ್ತ ಸಾಲಿನಲ್ಲಿ ಸವಣೂರ ಹಾಗೂ ಶಿಗ್ಗಾಂವ್ ತಾಲ್ಲೂಕುಗಳಲ್ಲಿ ಬಿಡುಗಡೆಯಾಗಿರುವ ಅನುದಾನ ಈ ಕೆಳಕಂಡಂತಿದೆ:

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಶಿಗ್ಗಾಂವ್	ಸವಣೂರು
1	5054 ನಬಾರ್ಡ್	100.00	–
2	5054 ಕೇಂದ್ರ ರಸ್ತೆ ನಿಧಿ	80.00	–
3	3054 ರಸ್ತೆ ಮತ್ತು ಸೇತುವೆ (ಯೋಜನೆ)	83.73	6.19
4	ನ್ಯಾಯಾಲಯ ಕಟ್ಟಡ ಕೇಂದ್ರ ಪುರಸ್ಕೃತ ಯೋಜನೆ I) 4059	–	–
	II) 4216	6.00	–
	ಒಟ್ಟು	**269.73**	**6.19**

ಇ) ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಕಾಮಗಾರಿಗಳ ಅವಶ್ಯಕತೆಗೆ ಅನುಸಾರವಾಗಿ ಅನುದಾನ ಒದಗಿಸಲಾಗುವುದು.

ಈ) ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನಕ್ಕೆ ಅನುಗುಣವಾಗಿ ಡಾಂಬರೀಕರಣ ಕಾಮಗಾರಿಯನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.

ಉ) ಸರ್ವೆ ಕೆಲಸವು ಪ್ರಗತಿಯಲ್ಲಿದ್ದು ಸರ್ವೆ ಕೆಲಸ ಪ್ರಕ್ರಿಯೆ ಮುಗಿದ ನಂತರ ರಸ್ತೆಯನ್ನು ಅತೀಕ್ರಮಣ ಮಾಡಿದ್ದನ್ನು ಇಲಾಖಾ ನಿಯಮಾನುಸಾರ ಕಟ್ಟಡಗಳನ್ನು ತೆರವು ಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಊ) ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

2216 (2449) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಎಲ್ಲಾ ವಿಧದ ವಿದ್ಯುತ್ ಗ್ರಾಹಕರ ಒಟ್ಟು ಸಂಖ್ಯೆ ಎಷ್ಟು;

ಆ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಸರಾಸರಿ ಉಪಯೋಗವಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು;

ಇ) ಬೆಂಗಳೂರು ನಗರದಲ್ಲಿ ವಿದ್ಯುತ್ ಕೊರತೆ ನೀಗಿಸಲು ಸೌರ ಶಕ್ತಿ (ಸೋಲಾರ್ ಹೀಟರ್) ಗ್ಯಾಸ್ ಗೀಸರ್ ಇತ್ಯಾದಿ ಉಪಯೋಗಿಸುವಂತೆ ಜನತೆಯನ್ನು ಪ್ರೇರೇಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ನಗರದಲ್ಲಿ ವಿದ್ಯುತ್ ಸರಬರಾಜು ಸುಧಾರಣೆಗಾಗಿ ಕೈಗೊಳ್ಳಲಿರುವ ಇತರ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಜೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಂಗಳೂರು ನಗರದಲ್ಲಿರುವ ಎಲ್ಲಾ ವಿಧದ ವಿದ್ಯುತ್ ಗ್ರಾಹಕರ ಒಟ್ಟು ಸಂಖ್ಯೆ: 22,83,017 (ಜನವರಿ –05 ರಲ್ಲಿ ಇದ್ದಂತೆ)

ಆ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಸರಾಸರಿ 20.10 ಮೀ.ಯು. ವಿದ್ಯುತ್ ಉಪಯೋಗವಾಗುತ್ತಿದೆ.

ಇ) ಬೆಂಗಳೂರು ನಗರದಲ್ಲಿ ಪೂರ್ಣ ಪ್ರಮಾಣದ ವಿದ್ಯುತ್ ಸರಬರಾಜು ಪೂರೈಸಲಾಗುತ್ತಿದ್ದು, ಕೊರತೆ ಇರುವುದಿಲ್ಲ.

ಈ) ಸೌರ ಶಕ್ತಿ ಹೊಂದಿರುವ ಗೃಹಗಳ ವಿದ್ಯುತ್ ಬಳಕೆಯ ಮೇಲೆ ಪ್ರತಿ ಯೂನಿಟ್‌ಗೆ 35 ಪೈಸೆಗಳಂತೆ ತಿಂಗಳೊಂದಕ್ಕೆ ಗರಿಷ್ಠ 35 ರೂ.ಗಳ ರಿಯಾಯಿತಿ ನೀಡಲಾಗುತ್ತಿದೆ.

ಉ) ನಗರದಲ್ಲಿ ವಿದ್ಯುತ್ ಸರಬರಾಜು ಸುಧಾರಣೆಗಾಗಿ ಈ ಕೆಳಗಿನ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

1) ಹೆಚ್ಚುವರಿ ವಿದ್ಯುತ್ ವಿತರಣಾ ಪರಿವರ್ತಕಗಳ ಸ್ಥಾಪನೆ.
2) ಹೊಸ ಆರ್.ಎಂ.ಯು.ಗಳ ಸ್ಥಾಪನೆ.
3) ವಿದ್ಯುತ್ ವಾಹನಗಳ ಉನ್ನತೀಕರಣ
4) ಜೋಡಿ ಕಂಬದ ಪರಿವರ್ತಿತ ಕೇಂದ್ರವನ್ನು ಒಂದು ಕಂಬದ ಪರಿವರ್ತಕ ಕೇಂದ್ರವನ್ನಾಗಿ ಬದಲಾಯಿಸುವುದು.
5) ಹೊಸ 11 ಕೆವಿ ವಿದ್ಯುತ್ ವಿತರಣಾ ಮಾರ್ಗಗಳ ನಿರ್ಮಾಣ
6) ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸುವುದು.

2217 (2460) ಶ್ರೀ ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಇವುಗಳನ್ನು ಉದ್ಯೋಗ ಪಾರ್ಕ್ ಎಂದು ಬದಲಿಸಲಾಗಿದೆಯೇ;

ಇ) ಉದ್ಯೋಗ ಪಾರ್ಕ್ ಆದಮೇಲೆ ಆಗಿರತಕ್ಕ ಪ್ರಯೋಜನಗಳೇನು;

ಈ) ಈ ಎಲ್ಲಾ ಉದ್ಯೋಗ ವಿನಿಮಯ ಕೇಂದ್ರ : ಉದ್ಯೋಗ ಪಾರ್ಕ್‌ಗಳಲ್ಲಿ ಇಲ್ಲಿಯವರೆಗೆ ನೋಂದಣಿ ಮಾಡಿಕೊಂಡ ನಿರುದ್ಯೋಗಿಗಳ ಸಂಖ್ಯೆ ಎಷ್ಟು;

ಉ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಉದ್ಯೋಗ ವಿನಿಮಯ ಕೇಂದ್ರಗಳಿಂದ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ಸಿಕ್ಕಿದೆ: